**PW - 1**

**ದಿಃ10.09.2024 ರಂದು ಮಾಡಿದ ಅರ್ಜಿಯಲ್ಲಿನ ಆದೇಶದಂತೆ, ಪ್ರಾಸಾ-1- ಬಸಲಿಂಗಯ್ಯ ಸುಬ್ಬಾಪುರಮಠ ರವರನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು - 09.10.2024.**

**ಪಾಟಿ ಸವಾಲುಃ ಶ್ರೀ ಎಂ.ಎ. ಖಾಜಿ, ವಕೀಲರಿಂದ ಶ್ರೀ ಐ.ಎ. ಬೇಪಾರಿ, 8ನೇ ಆರೋಪಿ ಪರ ವಕೀಲರ ಪರವಾಗಿಃ**

40. ಆ ದಿನ ನಮ್ಮ ಜೀಪಿಗೆ ಕೈ ಮಾಡಿದ ವ್ಯಕ್ತಿಯ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ವ್ಯಕ್ತಿಯು ಆ ದಿನ ದೋಬಿ ಘಾಟದಿಂದ ತಮ್ಮ ಮನೆಗೆ ಹೋಗುತ್ತಿದ್ದನು. ಸದರಿ ವ್ಯಕ್ತಿಯು ಇದ್ದ ಸ್ಥಳದಿಂದ ದೋಬಿ ಘಾಟ ಒಂದೂವರೆ ಕಿಮೀ ದೂರದಲ್ಲಿ ಇತ್ತು.

41. ಪಂಚರಿಗೆ ಆ ದಿನ ನೋಟೀಸನ್ನು ಕೊಟ್ಟಿದ್ದೆವು. ದೋಬಿ ಘಾಟ ಹತ್ತಿರ ನಾಲ್ಕು ರಸ್ತೆಗಳು ಸೇರುತ್ತವೆ ಎಂದರೆ ಸರಿ. ದೋಬಿ ಘಾಟ ಸರ್ಕಲನಲ್ಲಿ ಅಂಗಡಿಗಳು, ಲಾಡ್ಜಗಳು, ಪೆಟ್ರೋಲ ಬಂಕ ಇರುತ್ತವೆ ಎಂದರೆ ಸಾಕ್ಷಿಯು ಅಂಗಡಿಗಳು ಮಾತ್ರ ಇರುತ್ತವೆ ಎಂದು ಹೇಳಿರುತ್ತಾರೆ. ದೋಬಿ ಘಾಟ ಸರ್ಕಲನಿಂದ ಲಕ್ಷ್ಮೇಶ್ವರ ರಸ್ತೆ ಕಡೆಗೆ 50 ಅಡಿ ದೂರದಲ್ಲಿ ಪಾರ್ವತಿ ಪೆಟ್ರೋಲ ಬಂಕ ಇರುತ್ತದೆ ಎಂದರೆ ಸರಿ.  ದೋಬಿ ಘಾಟ ಸರ್ಕಲನಿಂದ ಗದಗ ಕಡೆಗೆ ಹೋಗುವ ರಸ್ತೆಯ ಕಡೆ ಶ್ರಾವಣಿ ಹೋಟೋಲ ಮತ್ತು ಡ್ರಿಂಕ್ಸ ಫ್ಯಾಕ್ಟರಿ ಎಂಬ ಹೆಸರಿನ ಬಾರ್ ಆ್ಯಂಡ ರೆಸ್ಟೋರೆಂಟ ಇರುತ್ತದೆ ಎಂದರೆ ಸಾಕ್ಷಿಯು ಆಗ ಅವುಗಳು ಇರಲಿಲ್ಲ ಎಂದು ಹೇಳಿರುತ್ತಾರೆ. ಸದರಿ ಶ್ರಾವಣಿ ಹೋಟೇಲ 2015 ರಿಂದಲೇ ಇರುತ್ತದೆ ಎಂದರೆ ಸರಿ. ಪಾರ್ವತಿ ಪೆಟ್ರೋಲ ಬಂಕ ಮತ್ತು  ಶ್ರಾವಣಿ ಹೋಟೇಲ ಮುಂದೆ ಸಿಸಿ ಟಿವಿ ಕ್ಯಾಮೆರಾ ಇರುತ್ತವೆ ಎಂದರೆ ಸಾಕ್ಷಿಯು, ಆಗ ಇರಲಿಲ್ಲ ಎಂದು ಹೇಳಿರುತ್ತಾರೆ. ಪಾರ್ವತಿ ಪೆಟ್ರೋಲ ಬಂಕ ಮತ್ತು  ಶ್ರಾವಣಿ ಹೋಟೇಲ ಮುಂದೆ ಸಿಸಿ ಟಿವಿ ಕ್ಯಾಮೆರಾ  ಇದ್ದಿರಲಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

42. ಆರೋಪಿಗಳನ್ನು ನೋಡಿದ ನಂತರ, ಸುತ್ತ ಮುತ್ತಲಿನ ಸ್ಥಳದಲ್ಲಿ ಮಲಗಿಕೊಂಡಿದ್ದವರನ್ನು ಕರೆಸಿ, ಅವರ ಸಮಕ್ಷಮ ಪಂಚನಾಮೆಯನ್ನು ಮಾಡಲು ಪ್ರಯತ್ನಿಸಿರುವುದಿಲ್ಲ. ಆ ದಿನ ನಾವು ದೋಬಿ ಘಾಟನಿಂದ 20 ಮೀಟರ ದೂರದಲ್ಲಿ ನಿಂತು ಕಾಯುತ್ತಿದ್ದೆವು. ಆರೋಪಿಗಳು ಕೈ ಮಾಡಿದ ಲಾರಿ ನಂಬರನ್ನು ನನಗೆ ಹೇಳಲು ಆಗುವುದಿಲ್ಲ. ಲೈಟಿನ ಕಂಬದ ನಂಬರನ್ನು ಹೇಳಲು ನನಗೆ ಈಗ ನೆನಪಿರುವುದಿಲ್ಲ.

43. ಮು.ಮಾ.1 ರಿಂದ 9 ರಂತಹ ವಸ್ತುಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಪಂಚನಾಮೆಯ ಪ್ರಿಂಟನ್ನು ಸ್ಥಳದಲ್ಲಿಯೇ ತೆಗೆಯಲಾಗಿರುತ್ತದೆ. ಲ್ಯಾಪಟಾಪ ಮತ್ತು ಪ್ರಿಂಟರನ್ನು ಸ್ಥಳಕ್ಕೆ ತೆಗೆದುಕೊಂಡು ಹೋದ ಬಗ್ಗೆ ಪಂಚನಾಮೆಯಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ.

44. ದಿನಾಂಕಃ 23.01.2018 ರಂದು, ರಾತ್ರಿ 11.00 ಗಂಟೆಗೆ ನಾನು ವಿಶೇಷ ಗಸ್ತು ವ ಪೆಟ್ರೋಲಿಂಗ ಕರ್ತವ್ಯದ ಸಲುವಾಗಿ ಸರ್ ಸರ್ಕಾರಿ ಜೀಪ ನಂ. ಕೆಎ-02/ಜಿ-494 ನೇದ್ದರಲ್ಲಿ ಚಾಸಾ-7 ರವರ ಚಾಲನೆಯಲ್ಲಿ ಠಾಣಾ ಹದ್ದಿಯಲ್ಲಿ ಪೆಟ್ರೋಲಿಂಗ ಮಾಡುತ್ತ, ಮುಳಗುಂದ ನಾಕಾದಿಂದ ಗಂಗಿಮಡಿ ಕ್ರಾಸ್ ಕಡೆ ಹೋಗುತ್ತಿರುವಾಗ, ನಸುಕಿನ 12.45 ಗಂಟೆ ಸುಮಾರಿಗೆ, ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬ ವ್ಯಕ್ತಿಯು ನಮ್ಮ ಜೀಪಿಗೆ ಕೈ ಮಾಡಿದ್ದು, ನಮ್ಮ ಜೀಪನ್ನು ನಿಲ್ಲಿಸಿದಾಗ, ಸದರಿ ವ್ಯಕ್ತಿಯು ನನ್ನ ಮುಂದೆ ಬಂದು, ಗದಗ ಕಡೆಯಿಂದ ಲಕ್ಷ್ಮೇಶ್ವರದ ಕಡೆ ಹೋಗುವ ರಸ್ತೆಯ ದೋಬಿ ಘಾಟದ ರಸ್ತೆಯ ಮೇಲೆ 7 ರಿಂದ 8 ಜನರು ಕೂಡಿಕೊಂಡು ಕಾರ ಮತ್ತು ಮೋಟರ ಸೈಕಲ ತೆಗೆದುಕೊಂಡು, ತಮ್ಮ ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ನಿಂತಿದ್ದು, ಕೆಲವು ಜನರು ಕಾರಿನಲ್ಲಿ ಇದ್ದು, ಅವರಿಗೆ ನೋಡಿದರೆ ಅವರು ಯಾವುದೇ ಒಂದು ಕೃತ್ಯ ಮಾಡುವ ಹಾಗೆ ಕಾಣಿಸುತ್ತಿದೆ ಎಂದು ಹೇಳಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

45. ನಾನು, ಚಾಸಾ-2, 3, 5, 6, 9, 13 ನೇದ್ದವರು ಸೇರಿ ನನ್ನ ಇಲಾಖಾ ವಾಹನದಲ್ಲಿ ಹಾಗೂ ಇನ್ನುಳಿದ ಸಿಬ್ಬಂದಿ ಜನರಾದ ಚಾಸಾ-4, 10, 12, 14,15 ಸೇರಿ ಇನ್ನೊಂದು ಇಲಾಖಾ ವಾಹನದಲ್ಲಿ ಠಾಣೆಯನ್ನು ಬೆಳಗಿನ ಜಾವ 01.45 ಗಂಟೆಗೆ ಠಾಣೆಯನ್ನು ಬಿಟ್ಟು ಮುಳಗುಂದ ನಾಕಾ ಮಾರ್ಗವಾಗಿ, ಲಕ್ಷ್ಮೇಶ್ವರ ರಸ್ತೆಯಲ್ಲಿರುವ ದೋಬಿ ಘಾಟ ಸಮೀಪ ಹೋಗಿ, ಎರಡೂ ವಾಹನಗಳನ್ನು ಮರೆಯಲ್ಲಿ ನಿಲ್ಲಿಸಿ, ನಾವು ಮತ್ತು ಪಂಚರು ಇಳಿದು ಮರೆಯಲ್ಲಿ ನಿಂತು ವಾಚ್ ಮಾಡಲಾಗಿ, ದೋಬಿ ಘಾಟ ಹತ್ತಿರ ರಸ್ತೆಯ ದಕ್ಷಿಣ ದಿಕ್ಕಿನ ಕಡೆಗೆ ರಸ್ತೆಯ ಮೇಲೆ 5 ಜನರು ಗುಂಪು ಕಟ್ಟಿಕೊಂಡು ನಿಂತಿದ್ದು ಮತ್ತು ಅವರ ಕೈಗಳಲ್ಲಿ ಮಾರಕಾಸ್ತ್ರಗಳು ಇದ್ದವು ಮತ್ತು ಅವರ ಹಿಂದೆ ಒಂದು ಕಾರ, ಮುಂದೆ ಸ್ವಲ್ಪ ಅಂತರದಲ್ಲಿ ಒಂದು ಮೋಟರ ಸೈಕಲ ನಿಂತಿದ್ದು, ಸದರಿ ಕಾರಿನಲ್ಲಿ ಇಬ್ಬರು ವ್ಯಕ್ತಿಗಳು ಇದ್ದು, ಸದರಿ ಮೋಟರ ಸೈಕಲ ಹತ್ತಿರ ಒಬ್ಬ ವ್ಯಕ್ತಿ ಇದ್ದು, ರಸ್ತೆಯ ಮೇಲೆ ನಿಂತ 5 ಜನರ ಪೈಕಿ, ಇಬ್ಬರು ಜನರು ಕಾರಿನ ಕಡೆ ಹೋಗಿ ನಿಂತರು ಮತ್ತು ಉಳಿದ ಮೂರು ಜನರು ರಸ್ತೆಯ ಮೇಲೆ ಹೋಗಿ ಬರುವ ಜನರನ್ನು ನೋಡುತ್ತಾ ವಾಹನಗಳನ್ನು ನಿಲ್ಲಿಸುತ್ತಾ ನಿಂತಿದ್ದು ಆಗ ಒಂದು ಲಾರಿ ಬಂದಿದ್ದು, ಅವರು ಕೈ ಮಾಡಲು ಸದರಿ ಲಾರಿ ನಿಲ್ಲಲಿಲ್ಲಾ ಮತ್ತು ಆ ಲಾರಿಯ ಚಾಲಕನು ನಿಲ್ಲಿಸದೇ ಜೋರಾಗಿ ಗಂಗಿಮಡಿ ಕ್ರಾಸ ಕಡೆಗೆ ಹೋಗಿದ್ದು, ಇದನ್ನು ನಾನು ಹಾಗೂ ಉಳಿದ ಸಿಬ್ಬಂದಿ ಜನರು ರಸ್ತೆಯಲ್ಲಿರುವ ಲೈಟಿನ ಬೆಳಕಿನಲ್ಲಿ ನೋಡಿ, ನಾವೆಲ್ಲರೂ ಕೂಡಿ ಸದರೀಯವರಿಗೆ ಹಿಡಿಯಬೇಕು

ಅಂತಾ ಎಲ್ಲರೂ ಸುತ್ತುವರೆಯಲು, ಅವರು ಓಡಿ ಹೋಗಲು ಪ್ರಯತ್ನಿಸಿದ್ದು, ಆಗ ನಾನು, ನನ್ನ ಜೊತೆ ಬಂದ ಸಿಬ್ಬಂದಿ ಜನರು ಅವರ ಪೈಕಿ ಮೂರು ಜನರನ್ನು ಹಿಡಿದುಕೊಂಡಿದ್ದು, ಕಾರಿನಲ್ಲಿದ್ದವರಿಗೆ ಹಾಗೂ ಮೋಟರ ಸೈಕಲ ಹತ್ತಿರ ನಿಂತುಕೊಂಡಿದ್ದವರಿಗೆ ಚಾಸಾ-4 ರವರು ಮತ್ತು ಅವರ ಜೊತೆ ಇದ್ದ ಸಿಬ್ಬಂದಿಯವರು ಹಿಡಿದುಕೊಂಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

46. ಮು.ಮಾ.1 ರಿಂದ 28 ನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಬೆಳಗಿನ ಜಾವ 02.40 ರಿಂದ 04.15 ರ ವರೆಗೆ ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಠಾಣೆಗೆ ಕೊಡಲಾದ ಲ್ಯಾಪಟಾಪನಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

47. 8 ನೇ ಆರೋಪಿಯಿಂದ ಯಾವುದೇ ಮುದ್ದೆ ಮಾಲುಗಳನ್ನು ಜಪ್ತ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಜಪ್ತಾದ ಮುದ್ದೆ ಮಾಲುಗಳಿಗೂ ಹಾಗೂ 8 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಿಂದ 12 ಫೋಟೋಗಳನ್ನು ಈ ಪ್ರಕರಣದಸಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ-1 ನ್ನೂ ಕೂಡಾ ಠಾಣೆಯಲ್ಲಿಯೇ ಈ ಪ್ರಕರಣದಸಿಕ್ಕೆ ಅನುಕೂಲವಾಗುವ ರೀತಿಯಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. 8 ನೇ ಆರೋಪಿ ಯಾವುದೇ ಅಪರಾಧವನ್ನು ಮಾಡದೇ ಇದ್ದರೂ ಕೂಡಾ, ಠಾಣೆಯ ಅಂಕಿ ಸಂಖ್ಯೆ ಸಲುವಾಗಿ ಆತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಲಾಗಿದೆ ಮತ್ತು ಆತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀ ಎಂ.ಎಂ. ಕುಕನೂರ, 2 ನೇ ಆರೋಪಿ ಪರ ವಕೀಲರಿಂದಃ**

48. ಪೋಲೀಸ ಠಾಣೆಯಿಂದ ಗುನ್ನಾ ಸ್ಥಳವು 2 ಕಿಮೀ ದೂರದಲ್ಲಿ ಇರುತ್ತದೆ. ಪೋಲೀಸ ಠಾಣೆಯಿಂದ ದಕ್ಷಿಣ ದಿಕ್ಕಿಗೆ ಗುನ್ನಾ ಸ್ಥಳ ಬರುತ್ತದೆ. ಕಾರಿನ ಕಡೆಗೆ ಹೋಗಿ ನಿಂತ ಇಬ್ಬರು ಆರೋಪಿಗಳ ಹೆಸರುಗಳು ಈಗ ನನ್ನ ನೆನಪಿಗೆ ಬರುತ್ತಿಲ್ಲ. ಸದರಿ ಲಾರಿಯವರನ್ನು ನಾವು ನಿಲ್ಲಿಸಲು ಪ್ರಯತ್ನಿಸಿರುವುದಿಲ್ಲ. ನಮ್ಮ ಎರಡು ಸರ್ಕಾರಿ ವಾಹನಗಳನ್ನು ಒಂದರ ಹಿಂದೆ ಒಂದರಂತೆ ನಿಲ್ಲಿಸಿದ್ದೆವು. ನಾವು ವಾಹನಗಳನ್ನು ನಿಲ್ಲಿಸಿದ ಸ್ಥಳಕ್ಕೂ ಮತ್ತು ಆರೋಪಿಗಳು ನಿಂತ ಸ್ಥಳಕ್ಕೂ 15 ರಿಂದ 20 ಮೀಟರ ಅಂತರ ಇತ್ತು.

49. 1 ರಿಂದ 3 ನೇ ಆರೋಪಿಗಳು ಒಂದೇ ಸ್ಥಳದಲ್ಲಿ ನಿಂತಿದ್ದರು, ಇಬ್ಬರು ಆರೋಪಿಗಳು ಕಾರಿನಲ್ಲಿ ಇದ್ದರು ಮತ್ತು ಇಬ್ಬರು ಆರೋಪಿಗಳು ಸದರಿ ಕಾರಿನ ಹತ್ತಿರ ನಿಂತಿದ್ದರು ಮತ್ತು ಒಬ್ಬ

ಆರೋಪಿ ಮೋಟರ ಸೈಕಲ ಹತ್ತಿರ ನಿಂತಿದ್ದರು. ಆ ಸಮಯದಲ್ಲಿ ಒಬ್ಬರ ಮುಖ ಒಬ್ಬರಿಗೆ ಕಾಣಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು, ಅಲ್ಲಿ ಲೈಟಿನ ಬೆಳಕು ಇತ್ತು ಎಂದು ಹೇಳಿರುತ್ತಾರೆ. ಅಲ್ಲಿ 2 ನೇ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ.

50. ಆ ದಿನ ಆರೋಪಿಗಳನ್ನು ಹಿಡಿಯಲು ಹೋದಾಗ, ನಾನು ಸಮವಸ್ತ್ರದಲ್ಲಿ ಇದ್ದೆನು. ಗುನ್ಹಾ ಸ್ಥಳದಲ್ಲಿ ಎಟಿಎಂ ಅಥವಾ ಬ್ಯಾಂಕು ಇರುವುದಿಲ್ಲ ಎಂದರೆ ಸರಿ. ಆ ದಿನ 2 ನೇ ಆರೋಪಿ ಎಂತಹ ಬಟ್ಟೆಗಳನ್ನು ಹಾಕಿದ್ದನು ಎಂದು ಹೇಳಲು ನನಗೆ ಈಗ ನೆನಪಿರುವುದಿಲ್ಲ. 2 ನೇ ಆರೋಪಿ ಹತ್ತಿರ ಖಾರದ ಪುಡಿ ಪಾಕೀಟು, ಒಂದು ಆ್ಯಪಲ್ ಕಂಪನಿಯ ಐ-ಫೋನ ಮತ್ತು ವಿವೋ ಕಂಪನಿಯ ಆ್ಯಂಡ್ರಾಯ್ಡ ಮೊಬೈಲ ಇದ್ದು, ನಾನು ಅವುಗಳನ್ನು ವಶಪಡಿಸಿಕೊಂಡಿದ್ದೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

51. ದೋಬಿ ಘಾಟ ಹತ್ತಿರ ಹೋಟೇಲ ಮತ್ತು ಮನೆಗಳು ಇರುತ್ತವೆ ಎಂದರೆ ಸಾಕ್ಷಿಯು, ಅಂಗಡಿಗಳು ಮಾತ್ರ ಇರುತ್ತವೆ ಎಂದು ಹೇಳಿರುತ್ತಾರೆ. ಮು.ಮಾ.3 ರಿಂದ 5  ರಂತಹ ವಸ್ತುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ.

52. 2 ನೇ ಆರೋಪಿಯನ್ನು ಸಿಲುಕಿಸುವ ಉದ್ದೇಶದಿಂದ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ರಾತ್ರಿ ಸಮಯದಲ್ಲಿ ಕೈಯಲ್ಲಿ ರಾಡು, ಖಾರದ ಪುಡಿ ಹಾಗೂ ಬೇರೆ ಬೇರೆ ಮಾರಕಾಸ್ತ್ರಗಳನ್ನು ಹಿಡಿದುಕೊಂಡು, ದಾರಿಯಲ್ಲಿ ಹೋಗಿ ಬರುವ ವಾಹನಗಳನ್ನು ನಿಲ್ಲಿಸುವ ಪ್ರಯತ್ನ ಮಾಡುತ್ತಿದ್ದುದರಿಂದ, ಅವರು ದರೋಡೆ ಮಾಡಲು ಸಿದ್ಧತೆ ಮಾಡಿಕೊಂಡಿದ್ದರು ಎಂದು ಹೇಳುತ್ತಿದ್ದೇನೆ.

53. ಪಂಚರಿಗೆ ನಾನು ನೋಟೀಸನ್ನು ಕೊಟ್ಟಿದ್ದೆನು. ಚಾಸಾ-5 ರವರು ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ಸ್ಥಳಕ್ಕೆ ಬಂದಿರುವುದಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಸ್ಥಳದಲ್ಲಿ ಲ್ಯಾಪಟಾಪಿನಲ್ಲಿ ಟೈಪ ಮಾಡಿ, ಅಲ್ಲಿಯೇ ಅದರ ಪ್ರಿಂಟನ್ನು ತೆಗೆಯಲಾಗಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

54. ನಮ್ಮ ವಾಹನಗಳನ್ನು ಕಂಟಿಗಳ ಮರೆಯಲ್ಲಿ ನಿಲ್ಲಿಸಿದ್ದೆವು. 2 ನೇ ಆರೋಪಿಗೂ ಹಾಗೂ ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ಆತನ ವಿರುದ್ಧ ಸುಳ್ಳು ದೂರನ್ನು

ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಶ್ರೀಮತಿ ಆರ್.ಡಿ. ಕರ್ಜಗಿ, ವಕೀಲರಿಂದ ಶ್ರೀ ಜೆ.ವಿ. ಪಠಾಣ, 3 ನೇ ಆರೋಪಿ ಪರ ವಕೀಲರ ಪರವಾಗಿಃ**

55. ಆ ದಿನ ವಾಹನ ಸವಾರರು ಯಾರೂ ಬಂದು ನನಗೆ ದರೋಡೆ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ ಎಂದು ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಆ ದಿನ 3 ನೇ ಆರೋಪಿ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಜಪ್ತಾದ ಮುದ್ದೆ ಮಾಲುಗಳಿಗೂ ಹಾಗೂ 3 ನೇ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಗೂ ಹಾಗೂ ಘಟನೆಗೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು ಆತನ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಆರೋಪಿಯಿಂದ ಯಾವುದೇ ವಸ್ತುಗಳನ್ನು ಜಪ್ತ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**(ಉಳಿದಂತೆ, ವಕೀಲರು 8 ನೇ ಆರೋಪಿ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಪಾಟಿ ಸವಾಲುಃ ಶ್ರೀಮತಿ ಎ.ಜೆ. ಉಳ್ಳಟ್ಟಿ, ವಕೀಲರಿಂದ ಶ್ರೀ ಜಿ. ಡಿ. ಜಂತ್ಲಿ, 6 ನೇ ಆರೋಪಿ ಪರ ವಕೀಲರ ಪರವಾಗಿಃ**

**(ವಕೀಲರು, 3 ಮತ್ತು 8 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)**

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

ಗದಗ